# 8ನೇ ತರಗತಿ ಪ್ರಥಮ ಸಂಕಲನಾತ್ಮಕ ಪರೀಕ್ಷೆ

**ಸಮಯ : 1.30 ಗಂಟೆ** **ವಿಷಯ : ಸಮಾಜ ವಿಜ್ಞಾನ** **ಗರಿಷ್ಠ ಅಂಕಗಳು : 40**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.** **4x1=4**

1. ರೋಮನ್ನರ ಭಾಷೆ
   (ಎ) ಲ್ಯಾಟೀನ್ (ಬಿ) ಗ್ರೀಕ್ (ಸಿ) ಇಂಗ್ಲೀಷ್ (ಡಿ) ಸಂಸ್ಕೃತ
2. 'ಲಾಗೋಸ್' ಎಂದರೆ,
   (ಎ) ನಗರ ರಾಜ್ಯ (ಬಿ) ಪೋಷಿಸು (ಸಿ) ಶಾಸ್ತ್ರ (ಡಿ) ಕೃಷಿಮಾಡು
3. ಭಾರತದ ಆದರ್ಶ ವೇಳೆಯು ಈ ರೇಖಾಂಶವನ್ನು ಆದರಿಸಿದೆ.
   (ಎ) 23½° ಉತ್ತರ ಅಕ್ಷಾಂಶ (ಬಿ) ಮಕರ ಸಂಕ್ರಾಂತಿ ವೃತ್ತ (ಸಿ) 82½° ಪೂರ್ವ ರೇಖಾಂಶ (ಡಿ) ಗ್ರೀನ್ ವಿಚ್ ರೇಖೆ
4. ಭಾರತವು ಅಳವಡಿಸಿಕೊಂಡಿರುವ ಅರ್ಥವ್ಯವಸ್ಥೆ
   (ಎ) ಸಮಾಜವಾದಿ ಅರ್ಥವ್ಯವಸ್ಥೆ (ಬಿ) ಬಂಡವಾಳಶಾಹಿ ಅರ್ಥವ್ಯವಸ್ಥೆ
   (ಸಿ) ಮಿಶ್ರ ಅರ್ಥವ್ಯವಸ್ಥೆ (ಡಿ) ಸಮತಾವಾದ ಅರ್ಥವ್ಯವಸ್ಥೆ

**II. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4x1=4**

5. ಇಂಕ ನಾಗರೀಕತೆ ಜನರ ಆರಾಧ್ಯ ದೈವ ಯಾವುದು?
6. ವಸ್ತು ವಿನಿಮಯ ಪದ್ಧತಿ ಎಂದರೇನು?
7. ರಾಜು ಒಂದು ಪುಸ್ತಕವನ್ನು ಕೊಂಡುಕೊಳ್ಳುತ್ತಾನೆ. ಇದು ಯಾವ ವಿಧದ ಆರ್ಥಿಕ ಚಟುವಟಿಕೆಯಾಗಿದೆ?
8. ಉತ್ತರಾರ್ಧಗೋಳವನ್ನು ಭೂ ಪ್ರಧಾನ ಗೋಳ ಎನ್ನುವರು. ಏಕೆ?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **4x2=8**

9. ಹವಾಂಗೋ ನದಿಯು ಚೀನಾದ ದುಗುಡ. ಹೇಗೆ?
10. ಆರ್ಥಿಕ ಚಟುವಟಿಕೆಯ ವಿಧಗಳನ್ನು ಪಟ್ಟಿಮಾಡಿರಿ.
11. ಭೂ ನಗ್ನೀಕರಣದ ಕರ್ತೃಗಳಾವುವು?
12. ನೇಮಕಾತಿಯ ವಿಧಗಳನ್ನು ತಿಳಿಸಿ. **ಅಥವಾ** ಕೇಂದ್ರ ಲೋಕಸೇವಾ ಆಯೋಗದ ರಚನೆ ತಿಳಿಸಿ.

**IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಆರು ವಾಕ್ಯಗಳಲ್ಲಿ ಉತ್ತರಿಸಿ.** **4x3=12**

13. ಭಾರತದ ಇತಿಹಾಸಕ್ಕೆ ಸಂಬಂಧಿಸಿದಂತೆ ದೇಶೀಯ ಆಧಾರಗಳನ್ನು ಪಟ್ಟಿ ಮಾಡಿರಿ. **ಅಥವಾ**
    ಭಾರತದ ಭೂ ಮೇಲ್ಮೈ ರಚನೆಯನ್ನು ವಿವರಿಸಿ.
14. ಸಂಸ್ಕೃತಿಯ ಗುಣಲಕ್ಷಣಗಳಾವುವು ?
15. ಸ್ಥಾನಿಕ ವೇಳೆ ಮತ್ತು ಆದರ್ಶವೇಳೆಗಳಿಗಿರುವ ವ್ಯತ್ಯಾಸಗಳೇನು? **ಅಥವಾ**
    ಭೂಕಂಪನದ ಪರಿಣಾಮಗಳನ್ನು ವಿಶ್ಲೇಷಿಸಿ.
16. ವಾಣಿಜ್ಯ ವಿಕಸನದ ಹಂತಗಳನ್ನು ವಿಶ್ಲೇಷಿಸಿ.

**V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **2x4=8**

17. ಹರಪ್ಪ ನಾಗರೀಕತೆಯ ನಗರ ಯೋಜನೆಯನ್ನು ವಿವರಿಸಿ. **ಅಥವಾ** ಮಹಾವೀರನ ಜೀವನವನ್ನು ವಿವರಿಸಿ.
18. ರಾಜ್ಯಶಾಸ್ತ್ರದ ಅಧ್ಯಯನದ ಪ್ರಾಮುಖ್ಯತೆಯನ್ನು ತಿಳಿಸಿ.

**VI. 19. ಭಾರತದ ನಕ್ಷೆಯನ್ನು ಬರೆದು ಈ ಕೆಳಕಂಡ ಸ್ಥಳಗಳನ್ನು ಗುರುತಿಸಿ.** **1+3=4**

(ಎ) ಕರ್ಕಾಟಕ ಸಂಕ್ರಾಂತಿ ವೃತ್ತ (ಬಿ) ಪಶ್ಚಿಮ ಘಟ್ಟಗಳು (ಸಿ) ಅಂಡಮಾನ್ ನಿಕೋಬಾರ್ ದ್ವೀಪಗಳು